ಹಳದಿ ಕಾರ್ಡುಗಳ ಫಲಾನುಭವಿಗಳನ್ನು ಗುರುತಿಸುವ ಸಮೀಕ್ಷಾ ಕಾರ್ಯ

6 (34) ಶ್ರೀ ಆತ್ಮಾನಂದ ಎಂ.ಎಸ್. (ಮಂಡ್ಯ): ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

1) ಹಳದಿ ಕಾರ್ಡುಗಳಿಗೆ ಅರ್ಹ ಫಲಾನುಭವಿಗಳನ್ನು ಗುರುತು ಹಚ್ಚುವ ದಿಶೆಯಲ್ಲಿ ಸಮೀಕ್ಷಾ ಕಾರ್ಯ ಪ್ರಾರಂಭವಾಗಿದೆಯೇ;

2) ಹಾಗಿದ್ದಲ್ಲಿ ಸಮೀಕ್ಷಾ ಕಾರ್ಯ ಯಾವ ಹಂತದಲ್ಲಿದೆ;

3) ಹಳದಿ ಕಾರ್ಡುಗಳನ್ನು ಪಡೆಯಲು ಫಲಾನುಭವಿಗಳಿಗೆ ಇರಬೇಕಾದ ಅರ್ಹತೆಗಳೇನು?

ಶ್ರೀ ಡಿ.ಬಿ. ಇನಾಂದಾರ್ (ಆಹಾರ ಮತ್ತು ನಾಗರೀಕ ಸರಬರಾಜು ರಾಜ್ಯ ಸಚಿವರು)

1) ಹೌದು. ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್ ರಾಜ್ ಇಲಾಖೆಯಿಂದ ಬಡತನ ರೇಖೆಗಿಂತ ಕೆಳಗಿನ ಕುಟುಂಬಗಳು ಎಂದು ಗುರುತಿಸಿ ತಯಾರಿಸಿರುವ ಪಟ್ಟಿಯನ್ನು ಸಂಬಂಧಿಸಿದ ಗ್ರಾಮ ಸಭೆಗಳಲ್ಲಿ ಮಂಡಿಸಿ ಗ್ರಾಮ ಸಭೆಗಳು ಈ ಯಾದಿಯನ್ನು ಪರಿಷ್ಕರಿಸುವ ಮೂಲಕ ಬಡ ಕುಟುಂಬಗಳನ್ನು ಗುರುತಿಸಲು ಹಾಗೂ ಯಾದಿಯಲ್ಲಿ ಸೇರಿಲ್ಲದಿರುವ ಅರ್ಹ ಬಡ ಕುಟುಂಬಗಳ ಪಟ್ಟಿಯನ್ನು ಪ್ರತ್ಯೇಕವಾಗಿ ತಯಾರಿಸಲು ಕ್ರಮ ವಹಿಸುವಂತೆ ರಾಜ್ಯದ ಎಲ್ಲಾ ಜಿಲ್ಲೆಯ ಜಿಲ್ಲಾಧಿಕಾರಿಗಳಿಗೆ ತಿಳಿಯಪಡಿಸಿದೆ.

2) ಹಾಲಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಿಂದ ರಾಜ್ಯದಾದ್ಯಂತ ಗ್ರಾಮ ಸಭೆಗಳು ನಡೆಯುತ್ತಿದ್ದು, ಸದರಿ ಗ್ರಾಮ ಸಭೆಗಳಲ್ಲಿ ಹಳದಿ ಪಡಿತರ ಚೀಟಿಗಳ ಫಲಾನುಭವಿಗಳನ್ನು ಗುರುತಿಸುವ ಕಾರ್ಯ ನಡೆಯುತ್ತಿದೆ.

3) ಹಳದಿ ಕಾರ್ಡುಗಳನ್ನು ಪಡೆಯಲು ಗ್ರಾಮಾಂತರ ಪ್ರದೇಶಗಳಲ್ಲಿನ ಕುಟುಂಬಗಳ ವಾರ್ಷಿಕ ಆದಾಯ ರೂ. 12,000ಕ್ಕಿಂತ ಕಡಿಮೆ ಇರುವ ಹಾಗೂ ನಗರ: ಪಟ್ಟಣ ಪ್ರದೇಶಗಳಲ್ಲಿನ ಕೊಳಚೆ ಪ್ರದೇಶಗಳಲ್ಲಿ ವಾಸಿಸುತ್ತಿರುವ ವಾರ್ಷಿಕ ಆದಾಯವು ರೂ. 17000ಕ್ಕಿಂತ ಕಡಿಮೆ ಇದ್ದ ಕುಟುಂಬಗಳು ಹಳದಿ ಪಡಿತರ ಚೀಟಿಗಳನ್ನು ಪಡೆಯಲು ಅರ್ಹರಿರುತ್ತಾರೆ.

ಶ್ರೀ ಎಂ.ಎಸ್. ಆತ್ಮಾನಂದ: ಮಾನ್ಯ ಅಧ್ಯಕ್ಷರೆ, ಹಳದಿ ಕಾರ್ಡುಗಳಿಗೆ ಅರ್ಹ ಫಲಾನುಭವಿಗಳನ್ನು ಗುರುತಿಸುವುದಕ್ಕೆ ಸಮೀಕ್ಷಾ ಕಾರ್ಯ ಪ್ರಗತಿಯಲ್ಲಿದೆ ಎಂದು ಉತ್ತರದಲ್ಲಿ ಮಾನ್ಯ ಸಚಿವರು ಹೇಳಿದ್ದಾರೆ. ಇದುವರೆಗೆ ಎಷ್ಟು ಪ್ರಗತಿಯಾಗಿದೆ? ಈ ಸಮೀಕ್ಷಾ ಕಾರ್ಯಕ್ಕೆ ಕಟ್ ಆಫ್ ಡೇಟ್ ನಿಗದಿ ಮಾಡಲಾಗಿದೆಯಾ? ಹಾಗೂ ಮಾನ್ಯ ಸಚಿವರು ಉತ್ತರವನ್ನು ಕೊಡುತ್ತಾ ಎರಡು ಪಟ್ಟಿಗಳನ್ನು ತಯಾರು ಮಾಡಬೇಕು ಎನ್ನುವ ಕೆಲಸಕ್ಕೆ ಎಲ್ಲಾ ಜಿಲ್ಲೆಯ ಜಿಲ್ಲಾಧಿಕಾರಿಗಳಿಗೆ ಹೇಳಿದ್ದೇವೆಂದು ತಿಳಿಸಿದ್ದಾರೆ. ಈ ಸಮೀಕ್ಷಾ ಕಾರ್ಯದಲ್ಲಿ ಕಂದಾಯ ಇಲಾಖೆ ಅಧಿಕಾರಿಗಳು ಸಹಕರಿಸುತ್ತಿಲ್ಲವೆಂದು ಹೇಳುವಂತಹ ಸಂದರ್ಭದಲ್ಲಿ, ಕಂದಾಯ ಇಲಾಖೆ ಅಧಿಕಾರಿಗಳ ಸಹಕಾರದಿಂದ ಫಲಾನುಭವಿಗಳಿಗೆ ಸಿಗತಕ್ಕಂಥ ದಿಸೆಯಲ್ಲಿ ಈ ಪಟ್ಟಿ ಪರಿಪೂರ್ಣವಾಗುತ್ತದೆಯೇ? ಮತ್ತು ಎಷ್ಟು ದಿವಸದಲ್ಲಿ ಈ ಕಾರ್ಯಕ್ರಮ ಮುಗಿಯುತ್ತದೆ?

ಶ್ರೀ ಡಿ.ಬಿ. ಇನಾಂದಾರ್: ಮಾನ್ಯ ಅಧ್ಯಕ್ಷರೆ, ಪ್ರತಿಯೊಂದು ಜಿಲ್ಲೆಯಲ್ಲಿ ಪಟ್ಟಿ ತಯಾರಾದ ನಂತರ ನಾವು ಈ ಯೋಜನೆಯನ್ನು ಜಾರಿಗೆ ತರತಕ್ಕಂಥ ಒಂದು ಆಜ್ಞೆಯನ್ನು ಹೊರಡಿಸಿದ್ದೇವೆ. ಈಗ ಗ್ರಾಮೀಣಾಭಿವೃದ್ಧಿ ಇಲಾಖೆಯ ಅಧಿಕಾರಿಗಳು ಗ್ರಾಮ ಸಭೆಗಳನ್ನು ಮಾಡಿ ಅದರ ಮುಖಾಂತರ ಫಲಾನುಭವಿಗಳನ್ನು ಆಯ್ಕೆ ಮಾಡತಕ್ಕಂಥ ಒಂದು ಆದೇಶವನ್ನು ಹೊರಡಿಸಿದ್ದೇವೆ. ಕೆಲವು ಜಿಲ್ಲೆಗಳಲ್ಲಿ ಎಂದರೆ ಬಳ್ಳಾರಿ ಜಿಲ್ಲೆಯಲ್ಲಿ ಪಟ್ಟಿ ಈಗಾಗಲೇ ತಯಾರಾಗಿ ಬಂದಿದೆ. ಈಗಾಗಲೇ ನಾವು ಹೊಸ ಕಾರ್ಡುಗಳನ್ನು ಈ ಹೊಸ ಯೋಜನೆಯಲ್ಲಿ ವಿತರಣೆ ಮಾಡುವಂತಹ ಕಾರ್ಯವನ್ನು ಪ್ರಾರಂಭ ಮಾಡಿದ್ದೇವೆ. ಯಾವ್ಯಾವ ಜಿಲ್ಲೆಯಲ್ಲಿ ಎಷ್ಟು ಬೇಗ ಪಟ್ಟಿಯನ್ನು ಕಳುಹಿಸಿ ಕೊಡುತ್ತಾರೊ, ಅಷ್ಟು ಬೇಗ ಅದನ್ನು ಜಾರಿಗೆ ತರುತ್ತಿದ್ದೇವೆ.

ಶ್ರೀ ಅಂಜನಮೂರ್ತಿ: ಮಾನ್ಯ ಅಧ್ಯಕ್ಷರೆ, ಈ ಹಳದಿ ಕಾರ್ಡುಗಳನ್ನು ಹಂಚಲು ಫಲಾನುಭವಿಗಳನ್ನು ಗುರುತಿಸುವುದಕ್ಕೆ ಸಾಮಾನ್ಯವಾಗಿ ತಹಸೀಲ್ದಾರ್ ಆಗಲಿ, ಅಸಿಸ್ಟೆಂಟ್ ಕಮಿಷನರ್ ಆಗಲಿ ಯಾರೂ ಹೋಗುವುದಿಲ್ಲ. ವಿಲೇಜ್ ಅಕೌಂಟೆಂಟ್ ಅಥವಾ ರೆವಿನ್ಯೂ ಸೆಕ್ರೆಟರಿಗಳು ಗ್ರಾಮಗಳಿಗೆ ಹೋಗಿ, ಅಲ್ಲೆ ನಿಜವಾಗಿ ಕಾಲೋನಿಗೆ ಅಥವಾ ಬಡವರ ಮನೆಗಳಿಗೆ ಹೋಗುವುದಿಲ್ಲ. ಎಲ್ಲೋ ಒಂದು ಕಡೆ ಹೋಗಿ ಕುಳಿತುಕೊಂಡು ಅವರು ಹೇಳಿದ್ದು ಬರೆದುಕೊಂಡು ಬರುತ್ತಾರೆ. ಆದುದರಿಂದ ಇದರ ಬಗ್ಗೆ ಸಂಬಂಧಪಟ್ಟ ಸಚಿವರು, ಅಸಿಸ್ಟೆಂಟ್ ಕಮಿಷನರ್ ಅಥವಾ ಡಿ.ಸಿ. ಯವರಿಗೆ ಒಂದು ಸ್ಟ್ರಿಕ್ಟ್ ಆಗಿ ಇನ್‌ಫರ್ಮೇಷನ್ ಕೊಟ್ಟು ನಿಜವಾದ ಫಲಾನುಭವಿಗಳನ್ನು ಗುರುತಿಸುವುದಕ್ಕೆ ಅವಕಾಶ ಮಾಡುವುದಕ್ಕೆ ಏನು ಕ್ರಮ ತೆಗೆದುಕೊಳ್ಳುತ್ತೀರಿ ಎಂದು ಕೇಳಿಕೊಳ್ಳುತ್ತೇನೆ.

ಶ್ರೀ ಡಿ.ಬಿ. ಇನಾಂದಾರ್: ಈ ಒಂದು ವಿಚಾರದಲ್ಲಿ ಗ್ರಾಮ ಸಭೆಗಳಿಗೆ ನಾವು ಅಧಿಕಾರವನ್ನು ಇವತ್ತು ಕೊಟ್ಟಿದ್ದೇವೆ. ಗ್ರಾಮೀಣಾಭಿವೃದ್ಧಿ ಇಲಾಖೆಯವರು ಏನು ಪಟ್ಟಿ ಮಾಡಿದ್ದಾರೆ, ಆ ಪಟ್ಟಿಯಲ್ಲಿ ಇರತಕ್ಕಂಥ ಇನ್‌ಎಲಿಜಿಬಲ್ ವ್ಯಕ್ತಿ ಯಾರಿದ್ದಾರೆ ಅವರನ್ನು ತೆಗೆಯುವುದಕ್ಕೆ ಹೇಳಿದ್ದೇವೆ. ಎಲಿಜಿಬಲ್ ಯಾರಾದರೂ ಉಳಿದುಕೊಂಡಿದ್ದರೆ, ಅವರು ಅಸಿಸ್ಟೆಂಟ್ ಕಮಿಷನರ್‌ಗೆ ಅರ್ಜಿ ಕೊಟ್ಟು ಪುನಃ ಎನ್‌ಕ್ವೈರಿ ಮಾಡಿ ಅವರಿಗೆ ಕೊಡತಕ್ಕಂಥ ವ್ಯವಸ್ಥೆಯನ್ನು ಸಹ ಮಾಡಿದ್ದೇವೆ.

11.00 ಎ.ಎಂ.

ಇಲ್ಲಿಯವರೆಗೆ ಯಾವುದೇ ರೇಷನ್ ಕಾರ್ಡ್ ಕೊಟ್ಟ ನಂತರ ಸದಾ ಜೀವಂತವಾಗಿರುತ್ತಿತ್ತು, ಅಡಿಷನ್, ಡಿಲಿಷನ್ ಎನ್ನುವುದಿರಲಿಲ್ಲ. ಆದರೆ ನಾವು ಹೊಸದಾಗಿ ಕೊಡುವ ವ್ಯವಸ್ಥೆಯಲ್ಲಿ ಅಡಿಷನ್, ಡಿಲಿಷನ್ ಮಾಡಲು ಅಥವಾ ಯಾರಾದರು ಸತ್ತುಹೋದರೆ ಹೊಸದಾಗಿ ಕಾರ್ಡ್ ತೆಗೆದುಕೊಳ್ಳಲು ಅವಕಾಶವಿರುವುದನ್ನು ಗಮನದಲ್ಲಿಟ್ಟುಕೊಂಡು ಇವತ್ತು ಆದೇಶವನ್ನು ಹೊರಡಿಸಿದ್ದೇವೆ. ಗ್ರಾಮದಲ್ಲಿ ಗ್ರಾಮ ಸಭೆ ಇವತ್ತು ಹೈಯೆಸ್ಟ್ ಅಥಾರಿಟಿ, ಇವತ್ತು ಆಯವ್ಯಯದಲ್ಲೂ ಕೂಡ ಮಾನ್ಯ ಮುಖ್ಯಮಂತ್ರಿಗಳು, ಗ್ರಾಮಸಭೆ ಪಂಚಾಯಿತಿಗಳಿಗೆ ಹೆಚ್ಚಿನ ಅಧಿಕಾರವನ್ನು ಕೊಟ್ಟಿದ್ದಾರೆ. ಗ್ರಾಮಸಭೆ ಒಂದು ಪ್ರಮುಖ ಸಂಸ್ಥೆಯಾಗಿದ್ದು ಅವರು ಫಲಾನುಭವಿಗಳನ್ನು ಆಯ್ಕೆ ಮಾಡುತ್ತಾರೆ ಅಂತಹವರಿಗೆ ಕಾರ್ಡ್ ಕೊಡಲಾಗುವುದು.

ಶ್ರೀ ಕರಡಿ ಸಂಗಣ್ಣ ಅಮರಪ್ಪ: ಮಾನ್ಯ ಅಧ್ಯಕ್ಷರೆ, ಯಾವುದೇ ಗ್ರಾಮದಲ್ಲಿ ಗ್ರಾಮ ಸಭೆ ಸರಿಯಾಗಿ ಆಗುತ್ತಿಲ, ರೆಡ್ಯುಸ್ ಮಾಡಿರುವುದರಿಂದ ಅಲ್ಲಿ ಕಾಂಪಿಟೇಷನ್ ಆಗಿದೆ ಗ್ರಾಮ ಸಭೆ ಸರಿಯಾಗಿ ನಡೆಯುತ್ತಿಲ್ಲ, ಅದಕ್ಕೊಂದು ಪರಿಹಾರವನ್ನು ಕಂಡುಹಿಡಿಯಬೇಕಾಗುತ್ತದೆ.

ಶ್ರೀ ಡಿ.ಬಿ. ಇನಾಂದಾರ್: ಇವತ್ತು ಬಹಳಷ್ಟು ಇನ್ ಎಲಿಜಬಲ್ ಇದ್ದವರಿಗೆ ಕಾರ್ಡ್‌ಗಳನ್ನು ಕೊಟ್ಟಿರುವುದು ತಮಗೆಲ್ಲಾ ಗೊತ್ತಿದೆ. ಅಂತಹವರನ್ನು ಎಲಿಮಿನೇಟ್ ಮಾಡುವ ವಿಷಯದಲ್ಲಿ ಹಾಗೂ ಯಾರು ಅರ್ಹರಾಗಿದ್ದರೊ ಅವರಿಗೆ ಈ ಕಾರ್ಡ್ ಸಿಗಬೇಕಾಗಿತ್ತೊ ಅವರಿಗೆ ಸಿಗುವ ದೃಷ್ಟಿಯಿಂದ ನಾವು ಈ ಹೊಸ ವ್ಯವಸ್ಥೆಯನ್ನು ಮಾಡಿದ್ದೇವೆ. ಗ್ರಾಮೀಣಾಭಿವೃದ್ಧಿ ಇಲಾಖೆಯಿಂದ ಗ್ರಾಮಸಭೆಗಳಲ್ಲಿ ಯಾರು ಕಡುಬಡತನರೇಖೆಗಿಂತ ಕೆಳಗಿದ್ದಾರೆ ಅವರಿಗೆ ಈ ಹಳದಿ ಕಾರ್ಡುಗಳನ್ನು ಕೊಟ್ಟು ಆಹಾರ ಧಾನ್ಯಗಳನ್ನು ಒದಗಿಸುವ ವ್ಯವಸ್ಥೆಯನ್ನು ಮಾಡುತ್ತಿದ್ದೇವೆಂದು ಹೇಳಬಯಸುತ್ತೇನೆ. ಮಾನ್ಯ ಸದಸ್ಯರ ಗಮನಕ್ಕೆ ತರಬಯಸುವುದೇನೆಂದರೆ ಕೆಲವು ತಾಲ್ಲೂಕುಗಳಲ್ಲಿ ಕುಟುಂಬ ಸದಸ್ಯರ ಸಂಖ್ಯೆಗಿಂತ ಜಾಸ್ತಿ ಹಸಿರು ಕಾರ್ಡುಗಳನ್ನು ಈಗಾಗಲೇ ಕೊಡಲಾಗಿದೆ, ನಿಜವಾದ ಬಡವರಿಗೆ ಈ ಕಾರ್ಡು ಸಿಗಲಾರದ ಕಾರಣದಿಂದ ಈ ಹೊಸ ವ್ಯವಸ್ಥೆಯನ್ನು ತಂದಿದ್ದೇವೆ.

ಶ್ರೀ ಅಂಜನಮೂರ್ತಿ: ಮಾನ್ಯ ಮಂತ್ರಿಗಳು ಫಲಾನುಭವಿಗಳನ್ನು ಆಯ್ಕೆ ಮಾಡುವ ಕೆಲಸ ಗ್ರಾಮ ಸಭೆ ಮಾಡುತ್ತದೆಂದು ಹೇಳಿದರು, ತಮಗೆ ಗೊತ್ತಿರುವಂತೆ ಪಂಚಾಯಿತಿ ಚುನಾವಣೆಯಲ್ಲಿ ಇವರು ನಮಗೆ ವಿರೋಧವಾಗಿ ಕೆಲಸ ಮಾಡುತ್ತಾರೆಂದರೆ ಇವರ ಹೆಸರನ್ನು ಹೇಳುವುದೇ ಇಲ್ಲ, ಆದುದರಿಂದ ವಿಲೇಜ್ ಅಕೌಂಟೆಂಟ್ ಅಥವಾ ರೆವಿನ್ಯೂ ಸೆಕ್ರೆಟರಿಯಿಂದ ಫಲಾನುಭವಿಗಳನ್ನು ಆಯ್ಕೆ ಮಾಡುವ ಕೆಲಸ ಮಾಡಬೇಕೆಂದು ಹೇಳುತ್ತೇನೆ.

ಶ್ರೀ ಡಿ.ಬಿ. ಇನಾಂದಾರ್: ಗ್ರಾಮ ಸಭೆ ಹೈಯೆಸ್ಟ್ ಬಾಡಿ, ಎಲ್ಲಾದರೂ ಅಂತಹ ಪ್ರಕರಣಗಳು ಇದ್ದರೆ ಅಪೀಲ್ ಮಾಡುವ ಪ್ರಾವಿಷನ್ ಅನ್ನು ಕೂಡ ಇದರಲ್ಲಿ ಇಟ್ಟಿದ್ದೇವೆ, ಯಾರಾದರೂ ಅಪೀಲ್ ಮಾಡಿದರೆ ಅಂತಹವರಿಗೆ ಕೊಡುವ ವ್ಯವಸ್ಥೆಯನ್ನು ಮಾಡಲಾಗುವುದು.

ಶ್ರೀ ಎಸ್.ಹೆಚ್. ಪುಟ್ಟರಂಗನಾಥ: ತಾವು ಫಲಾನುಭವಿಗಳನ್ನು ಗುರುತಿಸಲು ಮೂರುದಿವಸ ಕಾಲ ಕೊಟ್ಟಿದ್ದೀರಿ, ಈ ಗ್ರಾಮಸಭೆಗಳು ಫಲಾನುಭವಿಗಳ ಪಟ್ಟಿಯನ್ನು 27ನೇ ತಾರೀಖು ಸಲ್ಲಿಸಬೇಕೆಂದು ಸೂಚಿಸಲಾಗಿದೆ. ಮೂರು ದಿವಸಗಳಲ್ಲಿ 37 ಪಂಚಾಯಿತಿಗಳು ಫಲಾನುಭವಿಗಳ ಪಟ್ಟಿ ಮಾಡಲು ಸಾಧ್ಯವಾಗುವುದಿಲ್ಲ, ಆದುದರಿಂದ ದಯಮಾಡಿ, ಸ್ವಲ್ಪ ಕಾಲಾವಕಾಶ ಕೊಟ್ಟು ಫಲಾನುಭವಿಗಳನ್ನು ಗುರುತಿಸುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ಕೇಳುತ್ತೇನೆ.

ಶ್ರೀ ಡಿ.ಬಿ. ಇನಾಂದಾರ್: ಗ್ರಾಮಸಭೆಗಳನ್ನು ಕರೆಯುವ ಬಗ್ಗೆ ಆರ್‌ಡಿಪಿಆರ್ ಇಲಾಖೆಯವರು ಸರ್ಕ್ಯುಲರ್ ಅನ್ನು ಹೊರಡಿಸಿದ್ದಾರೆ, ಗ್ರಾಮಸಭೆಯವರು ಪಟ್ಟಿಯನ್ನು ಕೊಟ್ಟ ನಂತರವೆ ಕಾರ್ಡ್ ಕೊಡುವ ವಿಚಾರವನ್ನು ನಾವು ಇಟ್ಟುಕೊಂಡಿದ್ದೇವೆ ಎನ್ನುವ ಅಂಶವನ್ನು ಪ್ರತಿಯೊಬ್ಬ ಸದಸ್ಯರ ಗಮನಕ್ಕೆ ತರುವುದಕ್ಕೆ ಬಯಸುತ್ತೇನೆ.